ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಪಾಂಡವಪುರ.

ಸಿಸಿ ಸಂಖ್ಯೆ:612/2022

ಫಿರ್ಯಾದಿ:- ಅಭಿಷೇಕ್‌ಗೌಡ ಬಿನ್ ಹೊನ್ನೇಗೌಡ, ಸುಮಾರು 30 ವರ್ಷ, ವಾಸಃ ಹಿರೇಮರಳಿ ಗ್ರಾಮ, ಕಸಬಾ ಹೋಬಳಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ.

-: ವಿರುದ್ಧ :

ಆರೋಪಿ:- ಶ್ರೀಕಾಂತ ಎಸ್ ಬಿನ್ ಎಂ ಕೆ ಶ್ರೀನಿವಾಸ್, ಸುಮಾರು 30 ವರ್ಷ, ವಾಸಃ ಸರ್ಕಾರಿ ಬಾಲಕಿಯರ ವಿದ್ಯಾರ್ಥಿನಿಲಯದ ಹತ್ತಿರ, ಶಾಂತಿನಗರ, ಪಾಂಡವಪುರ ಟೌನ್, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.

**ಆರೋಪಣೆ**

ಶ್ರೀಮತಿ ಪದ್ಮ ಎಂ, 2ನೇ ಅಪರ **ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಪಾಂಡವಪುರ ಆದ ನಾನು ಆರೋಪಿಯಾದ ನಿಮ್ಮನ್ನು ಈ ಕೆಳಕಂಡಂತೆ ಆರೋಪಣೆಗೆ ಒಳಪಡಿಸುವುದೇನೆಂದರೆ,**

**-: ದಂಡ ಪ್ರಕ್ರಿಯಾ ಸಂಹಿತೆ ಕಲಂ: 251 ರಡಿಯಲ್ಲಿನ ಆರೋಪ :-**

ಆರೋಪಿಯಾದ ನೀವು ಫಿರ್ಯಾದುದಾರರ ಕಡೆಯಿಂದ ದಿನಾಂಕ 18.04.2022 ರಂದು ನಿಮ್ಮ ದರದು ನಿಮಿತ್ತ ಅಂದರೆ ತಮ್ಮ ಕುಟುಂಬದ ಕಾನೂನುಬದ್ದ ಅವಶ್ಯಕತೆಗಳಿಗಾಗಿ 2,70,000/- ರೂ.ಗಳ ಸಾಲವನ್ನು ಮೂರು ತಿಂಗಳ ಒಳಗಾಗಿ ವಾಪಸ್ಸು ಕೊಡುವುದಾಗಿ ಪಡೆದಿದ್ದು, ಸದರಿ ಸಾಲದ ಮರುಪಾವತಿಗಾಗಿ ಅದೇ ದಿನ ಆರೋಪಿಯಾದ ನೀವು ತಾವು ಖಾತೆಯನ್ನು ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪಾಂಡವಪುರ ಶಾಖೆಯ ದಿನಾಂಕ 18.07.2022 ರ ದಿನಾಂಕವುಳ್ಳ ಚೆಕ್ ನಂಬರ್ 828006 ಅನ್ನು ಸಾಲದ ಹಣವನ್ನು ತೀರುವಳಿ ಮಾಡಿಕೊಳ್ಳುವಂತೆ ಹೇಳಿ ನೀಡಿರುತ್ತೀರಿ. ಸದರಿ ಚೆಕ್‌ನಲ್ಲಿನ ಹಣವನ್ನು ಪಡೆಯುವ ಬಗ್ಗೆ ಪಿರ್ಯಾದುದಾರರು ತಮ್ಮದೇ ಬ್ಯಾಂಕ್ ಆದ ಉಜ್ಜೀವನ್ ಸ್ಮಾಲ್ ಫೈನಾನ್ಸ್, ಪಾಂಡವಪುರ ಶಾಖೆಗೆ ಹಾಜರು ಪಡಿಸಿದಾಗ ಖ-ತೆಯನ್ನು ಮುಕ್ತಾಯಗೊಳಿಸಿರುತ್ತಾರೆ **'ACCOUNT CLOSED'** ಎಂಬ ಹಿಂಬರಹವನ್ನು ದಿನಾಂಕ 20.07.2022 ರಂದು ಚೆಕ್ನ ಸಹಿತ ವಾಪಸ್ ಮಾಡಿರುತ್ತಾರೆ. ಆದ್ದರಿಂದ ಪಿರ್ಯಾದುದಾರರು ನಿಮಗೆ ದಿನಾಂಕ 27.07.2022 ರಂದು

ಲಿಖಿತ ನೋಟೀಸ್ ಅನ್ನು ಅಂಚೆ ನೋಂದಣಿ ಮೂಲಕ ನೀಡಿದ್ದು, ಸದರಿ ನೋಟೀಸು ದಿನಾಂಕ 30.07.2022 ರಂದು ವಾಪಸ್ಸು ಬಂದಿರುತ್ತದೆ ಹಾಗೂ ನೀವು ಪಿರ್ಯಾದುದಾರರಿಗೆ ನೀಡಬೇಕಾದ ಚೆಕ್ಕನ ಬಾಬ್ತು ಮೊತ್ತವನ್ನು ಹಿಂದಿರುಗಿಸಿರುವುದಿಲ್ಲ. ಈ ಮೇಲ್ಕಂಡ ಎಲ್ಲಾ ಅಂಶಗಳು ಆರೋಪಿಗೆ ಖುದ್ದು ತಿಳಿಸಿದ್ದರೂ ಸಹ ಪಿರ್ಯಾದುದಾರರ ಹಣವನ್ನು ಮರುಪಾವತಿ ಮಾಡದೆ ವಂಚನೆ ಮಾಡಿದ್ದು ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಾಯ್ದೆ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಪ್ರಶ್ನೆ- 1 ನಿಮಗೆ ಆರೋಪಣೆಯ ಎಲ್ಲಾ ಸಾರಾಂಶ ತಿಳಿಯಿತೆ?
ಉತ್ತರ -

ಪ್ರಶ್ನೆ- 2 ನೀವು ಸದರಿ ತಪ್ಪನ್ನು ಒಪ್ಪಿ ಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?
ಉತ್ತರ -

ಈ ಮೇಲ್ಕಂಡ ಆರೋಪವನ್ನು ಆರೋಪಿಗೆ ಮುಕ್ತ ನ್ಯಾಯಾಲಯದಲ್ಲಿ ಓದಿ ಹೇಳಿ ಆತನು ಹೇಳಿದಂತೆ ಉತ್ತರಗಳನ್ನು ಬರೆದಿರುತ್ತೇನೆಂದು ದೃಢೀಕರಿಸುತ್ತೇನೆ.

(ಶ್ರೀಮತಿ ಪದ್ಮ.ಎಂ)
2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ,
ಪಾಂಡವಪುರ.

ದಿನಾಂಕಃ 09.04.2025